**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ.1279/2024</u>**

<u>ಪಿರ್ಯಾದುದಾರರು</u> : ಸರ್ಕಾರದ ಪರವಾಗಿ ಬೀರೂರು ಪೊಲೀಸರಿಂದ

-ವಿರುದ್ದ-

<u>ಆರೋಪಿ :</u> ತಿಮ್ಮಪ್ಪ

**<u>-: ದೋಷಾರೋಪಣೆ :-</u>**

ಶ್ರೀ ತಾಹಾಕಲೀಲ್ ಕೆ.ಎ., ಬಿ.ಎ. ಎಲ್‌ಎಲ್.ಬಿ., 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

ಶ್ರೀ ತಿಮ್ಮಪ್ಪ ಬಿನ್ ಗೌರಜ್ಜಿ ತಿಮ್ಮಣ್ಣ,
57 ವರ್ಷ, ವ್ಯಾಪಾರ,
ವಾಸಃ ಜೋಡಿತಿಮ್ಮಾಪುರ ಗ್ರಾಮ,
ಬೀರೂರು ಹೋಬಳಿ,
ಕಡೂರು ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಮಾಡುವುದೇನೆಂದರೆಃ

ದಿನಾಂಕಃ 28.11.2023 ಮಧ್ಯಾಹ್ನ 1-50 ರ ಸಮಯದಲ್ಲಿ ಬೀರೂರು ಠಾಣಾ ಸರಹದ್ದಿನ ಜೋಡಿತಿಮ್ಮಾಪುರ ರೈಲ್ವೆ ಗೇಟ್ ಬಳಿ ಇರುವ ಬಿ.ಜಿ.ಎಸ್. ಶಾಲೆ ಹಿಂಭಾಗ ಜಮೀನುಗಳಿಗೆ ಹೋಗುವ ಕಾಲುದಾರಿಯಲ್ಲಿ ಆರೋಪಿಯಾದ ನೀವು 90 ಎಂ.ಎಲ್.ನ 18 ರಾಜಾವಿಸ್ಕಿ ಮತ್ತು ೧೮೦ ಎಂ.ಎಲ್.ನ ೦೭ ಓಲ್ಡ್ ಟಾವರಿನ್ ವಿಸ್ಕಿ ಮದ್ಯ ತುಂಬಿದ ಪೌಚುಗಳನ್ನು ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಸಾರ್ವಜನಿಕ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿದ್ದೀರಿ. ಆದ್ದರಿಂದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ ೩೨ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು 90 ಎಂ.ಎಲ್. ಮತ್ತು 180 ಎಂ.ಎಲ್.ನ ಸುಮಾರು 1413/- ರೂ ಬೆಲೆ ಬಾಳುವ ರಾಜಾ ವಿಸ್ಕಿಯ ೧೮ ಮದ್ಯದ ಪೌಚು ಮತ್ತು ೦೭ ಓಲ್ಡ್ ಟಾವರಿನ್ ವಿಸ್ಕಿ ಮದ್ಯ

ತುಂಬಿದ ಪೌಚುಗಳನ್ನು ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಹೊಂದಿದ್ದೀರಿ. ಆದ್ದರಿಂದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ ೩೨ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 15.05.2025.

ಸಹಿ/-

**(ತಾಹಾಕಲೀಲ್ ಕೆ.ಎ.)**
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಡೂರು.

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**
ಸಿ.ಸಿ.1279/2024

ಆರೋಪಿ ಸಂಖ್ಯೆ : 1
ಆಪಾದಿತರ ಹೆಸರು : ತಿಮ್ಮಪ್ಪ
ತಂದೆಯ ಹೆಸರು : ಗೌರಜ್ಜಿ ತಿಮ್ಮಣ್ಣ
ವಯಸ್ಸು : 57 ವರ್ಷ
ವಾಸಸ್ಥಳ : ಜೋಡಿತಿಮ್ಮಾಪುರ ಗ್ರಾಮ, ಬೀರೂರು ಹೋಬಳಿ, ಕಡೂರು ತಾಲ್ಲೂಕು.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ಅಡಿ ಪ್ರಕಾರ ಆರೋಪಿಯ ಹೇಳಿಕೆ:**

ಪ್ರ: 1) ನಿಮಗೆ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉ: ಹೌದು

ಪ್ರ: 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ?
ಉ: ವಿಚಾರಣೆಯಾಗಬೇಕು.

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ 15.05.2025 ರಂದು ದಾಖಲಿಸಿಕೊಂಡಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆಂದು ಈ ಮೂಲಕ ಧೃಡೀಕರಿಸುತ್ತೇನೆ.

ಸಹಿ/-
3 ನೇ ಹೆಚ್ಚುವರಿ ಪ್ರ:ದ:ನ್ಯಾ:ದಂ:ಕಡೂರು.

ಆರೋಪಿ ಸಹಿ: